# ಎನ್‌ಡಿಎ ಅಭ್ಯರ್ಥಿಗೆ ಜ್ಯೋತಿಗಣೇಶ್ ಮತಯಾಚನೆ

## ಕೆ.ಎಂ. ಸುರೇಶ್‌ಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಆಯ್ಕೆ ಮಾಡುವಂತೆ ಮನವಿ

• **ಕನ್ನಡಪ್ರಭ ವಾರ್ತೆ** ತುಮಕೂರು

ಎನ್‌ಡಿಎ ಅಭ್ಯರ್ಥಿಯಾಗಿರುವ ಕೆ.ಎಂ. ಸುರೇಶ್ ಅವರು ಶಿಕ್ಷಕರ ಪರವಾಗಿ ಕಾಳಜಿ ಹೊಂದಿದ್ದು ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಆಯ್ಕೆ ಮಾಡುವಂತೆ ತುಮಕೂರು ನಗರ ಶಾಸಕ ಜಿ.ಬಿ.ಜ್ಯೋತಿಗಣೇಶ್ ಶಿಕ್ಷಕರಿಗೆ ಮನವಿ ಮಾಡಿದರು.

ಆಗ್ನೇಯ ಪದವಿಧರರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಎಂ.ಸುರೇಶ್‌ಅವರಪರವಾಗಿಶಾಸಕರುಬುಧವಾರನಗರದ ವಿವಿಧ ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕಚೇರಿಗಳಿಗೆ ತೆರಳಿ ಪದವಿಧರ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಯಾಗಿ ಸಜ್ಜನ ವ್ಯಕ್ತಿ ಸುರೇಶ್ ಅವರು ಆಗ್ನೇಯ ಪದವಿಧರರ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿದ್ದಾರೆ. ಶಿಕ್ಷಣ ಸಂಸ್ಥೆ ಹೊಂದಿರುವ ಇವರಿಗೆ ಶಿಕ್ಷಕರ ಸಮಸ್ಯೆಗಳ ಅರಿವಿದೆ. ಈ ಕ್ಷೇತ್ರದಿಂದ ಆಯ್ಕೆಯಾದ ಬಿಜೆಪಿ ಸದಸ್ಯರು ಪರಿಷತ್ತಿನಲ್ಲಿ ಶಿಕ್ಷಕರ ಪರವಾಗಿ ಧ್ವನಿ ಎತ್ತಲಿದ್ದಾರೆ ಎಂದರು. ಶಿಕ್ಷಕರ ಪರವಾದಅನೇಕನೀತಿಗಳುರೂಪುಗೊಳ್ಳಲುಕಾಳಜಿವಹಿಸಿದ್ದಾರೆ. ಕೋವಿಡ್‌ಸಂದರ್ಭದಲ್ಲಿಆಗಿನಸಿಎಂಯಡಿಯೂರಪ್ಪನವರು ಶಿಕ್ಷಕರಿಗೆ ಹಾಗೂ ಸರ್ಕಾರಿ ನೌಕರರಿಗೆ ವಿಶೇಷ ಪ್ಯಾಕೇಜ್ ಘೋಷಿಸಿ ನೆರವಾಗಿದ್ದರು ಎಂದು ಹೇಳಿದರು.

ಆರ್ಯಭಾರತಿ ಪಾಲಿಟೆಕ್ನಿಕ್, ಸಪ್ತಗಿರಿ ಪದವಿ ಪೂರ್ವ ಕಾಲೇಜು, ಕೇಂಬ್ರಿಡ್ಜ್ ವಿದ್ಯಾಸಂಸ್ಥೆ ಮತ್ತಿತರ ಶಿಕ್ಷಣ ಸಂಸ್ಥೆಗಳು, ವಿವಿಧ ಸರ್ಕಾರಿ ಕಚೇರಿಗಳಿಗೆ ತೆರಳಿ ಶಾಸಕರು ಎನ್‌ಡಿಎ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡಿದರು.

ಆರ್ಯಭಾರತಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಸತ್ಯನಾರಾಯಣ, ನಗರ ಪಾಲಿಕೆ ಮಾಜಿ ಸದಸ್ಯ ಸಿ.ಎನ್. ರಮೇಶ್, ತುಮಕೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಸುನಿಲ್‌ಪ್ರಸಾದ್, ಮುಖಂಡರಾದ ರವಿಕುಮಾರ್, ಯತೀಶ್‌ಗೌಡ, ರಮೇಶ್ ನಾಯಕ್ ಭಾಗವಹಿಸಿದ್ದರು.



# ಬಿಜೆಪಿ ಮುಖಂಡರಿಂದ ಚುನಾವಣೆ ಕಾರ್ಯತಂತ್ರ

## ಶಾಸಕ ಜಿ.ಬಿ. ಜ್ಯೋತಿಗಣೇಶ್ ನೇತೃತ್ವದಲ್ಲಿ ಕೀ ವೋಟರ್ಸ್ ಸಭೆ

• **ಕನ್ನಡಪ್ರಭ ವಾರ್ತೆ** ತುಮಕೂರು

ಆಗ್ನೆಯ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಹಿನ್ನೆಲೆ ಬಿಜೆಪಿ ಕ್ಷೇತ್ರದಾದ್ಯಂತ ಪದವೀಧರ ಮತದಾರರನ್ನು ಸಂಪರ್ಕಿಸಿ, ಎನ್‌ಡಿಎಅಭ್ಯರ್ಥಿಪರವಾಗಿಬೆಂಬಲಕ್ರೋಢೀಕರಿಸುವ ನಿಟ್ಟಿನಲ್ಲಿಸಂಘಟಿತಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂದು ಪಕ್ಷದ ಮುಖಂಡರು ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ತುಮಕೂರು ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಅವರ ನೇತೃತ್ವದಲ್ಲಿ ವಿವಿಧ ವೃತ್ತಿಪರ ಮತ್ತು ಪ್ರಮುಖ ಮತದಾರರನ್ನು ಒಳಗೊಂಡ ಕೀ ವೋಟರ್ಸ್ ಸಭೆ ನಡೆಸಲಾಯಿತು. ವಕೀಲರು, ವೈದ್ಯರು, ಲೆಕ್ಕಪರಿಶೋಧಕರು, ಸಹಕಾರಿ ಕ್ಷೇತ್ರದ ಪ್ರತಿನಿಧಿಗಳು ಹಾಗೂ ಖಾಸಗಿ ಬ್ಯಾಂಕ್‌ಗಳ ಉದ್ಯೋಗಿಗಳು ಸೇರಿದಂತೆವಿವಿಧವಲಯಗಳಲ್ಲಿಗುರುತಿಸಿಕೊಂಡಿರುವ ಪ್ರಮುಖರು ಸಭೆಯಲ್ಲಿ ಭಾಗವಹಿಸಿದ್ದರು. ಪದವೀಧರ ಮತದಾರರನ್ನು ಪರಿಣಾಮಕಾರಿಯಾಗಿ ತಲುಪುವುದು, ಅವರ ಸಮಸ್ಯೆಗಳನ್ನು ಆಲಿಸುವುದು ಹಾಗೂ ಚುನಾವಣೆಯಲ್ಲಿ ಪಕ್ಷದ ಪರವಾಗಿ ವ್ಯಾಪಕ ಬೆಂಬಲ ಪಡೆಯಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲಾಯಿತು.

ನಗರದ ವಿವಿಧ ಬಡಾವಣೆಗಳಲ್ಲಿ, ವೃತ್ತಿಪರ ಸಂಘಟನೆಗಳು ಹಾಗೂ ಪದವೀಧರ ಮತದಾರರ ಗುಂಪುಗಳನ್ನು ಸಂಪರ್ಕಿಸುವುದು, ಮತದಾರರೊಂದಿಗೆ ನಿರಂತರ ಸಂವಾದ ನಡೆಸುವುದು ಮತ್ತು ಚುನಾವಣಾ ನಿರ್ವಹಣಾ ತಂಡಗಳ ನಡುವೆ ಸಮನ್ವಯ ಸಾಧಿಸುವ ಮೂಲಕ ಪಕ್ಷದ ಚುನಾವಣಾಸಿದ್ಧತೆಯನ್ನುಮತ್ತಷ್ಟುಬಲಪಡಿಸುವ ಕುರಿತು ಚರ್ಚೆ ನಡೆಯಿತು.

ರಾಜ್ಯ ಬಿಜೆಪಿ ಸಹ ಪ್ರಭಾರಿ ಕಾಸಂ ವೆಂಕಟೇಶ್ವರಲು, ತುಮಕೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಶಂಕರ್‌ಹೆಬ್ಬಾಕ, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಕೇಶವ ಪ್ರಸಾದ್, ಅಂಬಿಕಾ ಹುಲಿನಾಯ್ಕರ್, ಹುಲಿನಾಯ್ಕರ್‌ಹಾಗೂ ಹುಚ್ಚಯ್ಯನವರು ಸೇರಿದಂತೆ ಪಕ್ಷದ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.


**ಬ್ಯಾಂಕ್ ಆಫ್ ಬರೋಡ / Bank of Baroda** ತುಮಕೂರು ಮುಖ್ಯ ಶಾಖೆ
ಹೊನ್ನಕಮಲ ಕ್ರೆಸ್ಟ್, ಜನರಲ್ ಕರಿಯಪ್ಪ ರಸ್ತೆ, ಕೆ.ಆರ್. ವಿಸ್ತರಣೆ, ತುಮಕೂರು – 572101.
ದೂರವಾಣಿ: 0816–2278780
ಇಮೇಲ್: vjtumk@bankofbaroda.com

**ತಿದ್ದುಪಡಿ**

ದಿನಾಂಕ: 11.09.2026 ರಂದು ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಾಹನ ಇ–ಹರಾಜು ಪ್ರಕಟಣೆಯಲ್ಲಿ **ಶ್ರೀ ಮಂಜುನಾಥ್ ಎನ್.** ಅವರಿಗೆ ಸೇರಿದ ಆರ್ ಟಿ ಒ ನೋಂದಣಿ ಸಂಖ್ಯೆ: KA-06-MB-5084 ವಾಹನಕ್ಕೆ ಸಂಬಂಧಿಸಿದಂತೆ ವಾಹನದ ವಿವರವನ್ನು ತಪ್ಪಾಗಿ 'SKODA' ಎಂದು ನಮೂದಿಸಲಾಗಿತ್ತು. ಸರಿಯಾದ ವಿವರಗಳು ಈ ಕೆಳಗಿನಂತಿವೆ: ವಾಹನದ ತಯಾರಿಕೆ ಮತ್ತು ಮಾದರಿ: VOLKSWAGEN TAIGUN 1.5 GT TSI MT, BS6. ಉಳಿದ ಎಲ್ಲಾ ವಿವರಗಳು ಯಥಾಸ್ಥಿತಿಯಲ್ಲಿರುತ್ತವೆ. ಎಂದು ಸಂಬಂಧಪಟ್ಟ ಎಲ್ಲರ ಗಮನಕ್ಕೆ ತರಲಾಗುತ್ತಿದೆ.

ಸಹಿ/–
ದಿನಾಂಕ: 14.10.2026 ಅಧಿಕೃತ ಅಧಿಕಾರಿ
ಸ್ಥಳ: ಬೆಂಗಳೂರು ಬ್ಯಾಂಕ್ ಆಫ್ ಬರೋಡ



**ಮಾನ್ಯ ಗೌರವಾನ್ವಿತ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಾಗಮಂಗಲ**
**ಎಮ್.ಸಿ. ಸಂಖ್ಯೆ:20/2026**

ಅರ್ಜಿದಾರರು: ಮಂಜುನಾಥ್ ಜಿ
ವಿರುದ್ಧ
ಎದುರುದಾರರು: ಐಶ್ವರ್ಯ ರೈ ಎಂ
**ಎದುರುದಾರರಿಗೆ ನ್ಯಾಯಾಲಯದ ನೋಟೀಸ್**
ಎದುರುದಾರರು:
ಶ್ರೀಮತಿ ಐಶ್ವರ್ಯ ರೈ ಎಂ ಬಿನ್ ಮಧು ಕೋಂ. ಮಂಜುನಾಥ್ ಜಿ, ಸುಮಾರು 35 ವರ್ಷಗಳು, ವಾಸ: ನಂ. 384/2ನೇ ಮಹಡಿ, 5ನೇ ಅಡ್ಡ ರಸ್ತೆ, 7ನೇ ಮುಖ್ಯ ರಸ್ತೆ, ಅಯ್ಯಪ್ಪನಗರ, ಕೆ.ಆರ್. ಪುರಂ, ಬೆಂಗಳೂರು-560036.

ಮೇಲೆ ಹೇಳಿದ ಅರ್ಜಿದಾರರಾದ ಮಂಜುನಾಥ್ ಜಿ ರವರ ಮೇಲಿನ ಅರ್ಜಿಯನ್ನು ವೈವಾಹಿಕ ಕರ್ತವ್ಯಗಳ ನಿರ್ದಿಷ್ಟ ಪಾಲನೆ ಮತ್ತು ಇತರ ಪರಿಹಾರಗಳನ್ನು ಕೋರಿ ಎದುರುದಾರರ ವಿರುದ್ಧ ಸಲ್ಲಿಸಿದ್ದು ಸದರಿ ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯವು ದಿನಾಂಕ 30-10-2026 ರಂದು ವಿಚಾರಣೆಗೆ ಇಟ್ಟಿದ್ದು ಅಂದು ತಾವುಗಳು 11.00 ಗಂಟೆಗೆ ಸರಿಯಾಗಿ ವೈಯಕ್ತಿಕವಾಗಿ ಅಥವಾ ನಿಮ್ಮಿಂದ ಅಧಿಕಾರ ಪಡೆದ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ತಂಟೆ ತಕರಾರು ಅಥವಾ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ಮೇಲಿನ ಪ್ರಕರಣವನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 06-10-2026 ರಂದು ನೀಡಲಾಗಿದೆ.
ಸಹಿ/-
ಶ್ರೀ ಶಿವಕುಮಾರ್ ಕೆ.ಪಿ.
ವಕೀಲರು.

ನ್ಯಾಯಾಲಯದ ಅಪ್ಪಣೆ ಮೇರೆಗೆ,
ಸಹಿ/-
ಶಿರಸ್ತೇದಾರರು
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ನಾಗಮಂಗಲ.



CAUTION - Readers are advised to make appropriate enquiries while responding to advertisements in these columns. Kannada Prabha Publications Ltd., does not vouch for any claims made by the Advertisers. The Printer, Publisher, Editor and Owner of Kannada Prabha Publications Ltd., shall not be held responsible/liable for any consequences, in case such claims are found to be false. ಕನ್ನಡಪ್ರಭ



**ಗ್ರೋ** | **ಬಿಲಿಯನ್‌ಬ್ರೇನ್ಸ್ ಗ್ಯಾರೇಜ್ ವೆಂಚರ್ಸ್ ಲಿಮಿಟೆಡ್**
(ಈ ಹಿಂದೆ ಬಿಲಿಯನ್‌ಬ್ರೇನ್ಸ್ ಗ್ಯಾರೇಜ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

**ಲೆಕ್ಕಪರಿಶೋಧನೆಗೊಳಪಡದ ಹಣಕಾಸು ಫಲಿತಾಂಶಗಳು**
**ಸೆಪ್ಟೆಂಬರ್ 30, 2026ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವರ್ಷಕ್ಕೆ**

ಕಂಪನಿಯ ನಿರ್ದೇಶಕರ ಮಂಡಳಿಯು ಅಕ್ಟೋಬರ್ 14, 2026 ರಂದು ನಡೆದ ತನ್ನ ಸಭೆಯಲ್ಲಿ, ಸೆಪ್ಟೆಂಬರ್ 30, 2026ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವರ್ಷದ ಲೆಕ್ಕಪರಿಶೋಧನೆಗೊಳಪಡದ ಪ್ರತ್ಯೇಕ (ಸ್ಟ್ಯಾಂಡಲೋನ್) ಮತ್ತು ಏಕೀಕೃತ (ಕನ್ಸಾಲಿಡೇಟೆಡ್) ಹಣಕಾಸು ಫಲಿತಾಂಶಗಳಿಗೆ ಅನುಮೋದನೆ ನೀಡಿತು.

**PDF ವೀಕ್ಷಕ**
ಕೆಳಗೆ ತೋರಿಸಿರುವ QR ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಅಥವಾ ಈ ಲಿಂಕ್‌ಗೆ ಭೇಟಿ ನೀಡುವ ಮೂಲಕ ಸೀಮಿತ ಪರಿಶೀಲನಾ ವರದಿಯೊಂದಿಗೆ (Limited Review Report) ಫಲಿತಾಂಶಗಳನ್ನು ವೀಕ್ಷಿಸಬಹುದು:
https://groww.in/investor-relations/performance/quarterly-results

ನಿರ್ದೇಶಕರ ಮಂಡಳಿಯ ಪರವಾಗಿ ಮತ್ತು ಅದರ ಆದೇಶದ ಮೇರೆಗೆ ಬಿಲಿಯನ್‌ಬ್ರೇನ್ಸ್ ಗ್ಯಾರೇಜ್ ವೆಂಚರ್ಸ್ ಲಿಮಿಟೆಡ್
ಸ್ಥಳ: ಬೆಂಗಳೂರು
ದಿನಾಂಕ: ಅಕ್ಟೋಬರ್ 14, 2026
ಸಹಿ/-
ಇಶಾನ್ ಬನ್ಸಾಲ್
ಪೂರ್ಣಾವಧಿ ನಿರ್ದೇಶಕರು ಮತ್ತು ಮುಖ್ಯ ಹಣಕಾಸು ಅಧಿಕಾರಿ (CFO)
ಡಿಐಎನ್: 06538822

SEBI (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 33 ಮತ್ತು ನಿಯಮ 47(1) ರ ಅಡಿಯಲ್ಲಿ ಹೊರಡಿಸಲಾಗಿದೆ.

ನೋಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ: ವೈಷ್ಣವಿ ಟೆಕ್ ಪಾರ್ಕ್, ಸೌತ್ ಟವರ್ 3ನೇ ಮಹಡಿ, ಸರ್ವೆ ಸಂಖ್ಯೆ. 16/1 & 17/2, ಅಂಬಲೀಪುರ ಗ್ರಾಮ, ವರ್ತೂರು ಹೋಬಳಿ, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ, ಭಾರತ, 560103 | ದೂರವಾಣಿ: 080-69601300 | ಇಮೇಲ್: corp.secretarial@groww.in | ವೆಬ್‌ಸೈಟ್: www.groww.in | ಕಾರ್ಪೊರೇಟ್ ಗುರುತಿನ ಸಂಖ್ಯೆ: L72900KA2018PLC109343



**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್** (ಒಂದು ಶೆಡ್ಯೂಲ್ ವಾಣಿಜ್ಯ ಬ್ಯಾಂಕ್) | ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

**2002ರ ಸರ್ಫೇಸಿ ಕಾಯಿದೆಯ ಕಲಂ 13(2)ರಡಿ ಡಿಮಾಂಡ್ ನೋಟಿಸ್**

ಆದಾಗ್ಯೂ, ಕೆಳಕಂಡಂತೆ ತಿಳಿಸಲಾದ ಸಾಲಗಾರರು, ಸಹ-ಸಾಲಗಾರರು, ಜಾಮೀನುದಾರರು ಮತ್ತು ಅಡಮಾನದಾರರು ಆದ ನೀವು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನಿಂದ, ನಿಮ್ಮಗಳ ಸ್ಥಿರ ಆಸ್ತಿಗಳನ್ನು ಅಡಮಾನ ಮಾಡಿ ಸಾಲಗಳನ್ನು ಪಡೆದಿರುತ್ತೀರಿ. ನೀವೆಲ್ಲಾ ಸಾಲ ತೀರಿಸದೇ ವಿಫಲರಾಗಿ ಸುಸ್ತಿಯಾದುದರಿಂದ ನಿಮ್ಮ ಸಾಲದ ಖಾತೆಯನ್ನು ನಿಷ್ಕ್ರಿಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ, ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಭದ್ರತಾ ಸಾಲಿಗರಾಗಿ, ಕಾಯಿದೆಯಡಿ ಮತ್ತು ಸದರಿ ಕಾಯಿದೆಯ ಕಲಂ 13(2) ಮತ್ತು 2002ರ ಭದ್ರತಾ ಹಿತಾಸಕ್ತಿ ನಿಯಮಗಳ ನಿಯಮ 2ರ ಜೊತೆಗೆ ಒದಗಿಬಂದ ಅಧಿಕಾರಗಳಂತೆ, ಕೆಳಕಂಡಂತಿರುವ ವಿವರಗಳ ಪಟ್ಟಿಯ ಕಾಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ ಸಹ-ಸಾಲಗಾರರು/ ಜಾಮೀನುದಾರರು/ಅಡಮಾನದಾರರುಗಳಿಗೆ **ಡಿಮಾಂಡ್ ನೋಟೀಸ್** ಜಾರಿಮಾಡಿ ನೋಟೀಸ್‌ನಲ್ಲಿ ನಮೂದಿಸಲಾದ ಬಾಕಿ ಸಾಲದ ಮೊಬಲಗು ಮತ್ತು ತದನಂತರದ ಬಡ್ಡಿ ಸೇರಿದ ಮೊತ್ತವನ್ನು ಡಿಮಾಂಡ್ ನೋಟೀಸ್‌ನ ದಿನಾಂಕದಿಂದ 60 ದಿನಗಳೊಳಗಾಗಿ ತೀರಿಸಬೇಕೆಂದು ಸೂಚಿಸಲಾಗಿತ್ತು. ಆದರೆ ಕೆಲವು ವಿವಿಧ ಕಾರಣಗಳಿಂದ ನೋಟೀಸ್‌ಗಳ ಸರ್ವ್ ಮಾಡಲಾಗಲಿಲ್ಲ.

| ಕ್ರ. ಸಂ | ಸಾಲಗಾರ/ಸಹ-ಸಾಲಗಾರ/ ಜಾಮೀನುದಾರ/ ಅಡಮಾನದಾರರ ಹೆಸರು | ಸಾಲದ ಖಾತೆ ಸಂಖ್ಯೆ ಮತ್ತು ಸಾಲದ ಮೊತ್ತ | ಪರಿಮಾಣಕ್ಕೆ ಒಳಗಾಗುವ ಭದ್ರತಾ ಆಸ್ತಿಯ ವಿವರಣೆ | ಎನ್‌ಪಿಎ ಮತ್ತು ಡಿಮಾಂಡ್ ನೋಟೀಸ್‌ನ ದಿನಾಂಕ | ಬಾಕಿ ಮೊತ್ತ ರೂ./ಗಳಲ್ಲಿ ಕೆಳಕಂಡಂತೆ ಇದ್ದಂತೆ |
|---|---|---|---|---|---|
| 1 | 1) ಶ್ರೀ ಪ್ರಜ್ವಲ್ ಪಿಆರ್, ಬಿನ್ ರಮೇಶ್, 2) ಶ್ರೀ ರಮೇಶ್, ಬಿನ್ ನಾರಾಯಣಪ್ಪ | Loan Account No. 45460430001971 Loan Amount: Rs. 5,00,000/- | ಅಡಮಾನಿತ ಸ್ಥಿರಾಸ್ತಿ : ನಿಮ್ಮ ಅಪೇಕ್ಷೆಯಂತೆ, ವಸತಿ ಕಟ್ಟಡದ ವೇಳಾಪಟ್ಟಿ ಆಸ್ತಿಗೆ ಸಂಬಂಧಿಸಿದಂತೆ ನಾವು ಮೂಲ ಪರಿಶೀಲನಾ ವರದಿಯನ್ನು ಇಲ್ಲಿ ಸಲ್ಲಿಸುತ್ತೇವೆ ಗ್ರಾಮ ಪಂಚಾಯತ್ ಖಾತಾ ನಂ. 13/1 ಮತ್ತು ಇ-ಖಾತಾ ನಂ. 152500300600500014 ಅಳತೆ ಪೂರ್ವ–ಪಶ್ಚಿಮ : 13.715 ಮೀಟರ್ಸ್ ಮತ್ತು ಉತ್ತರ–ದಕ್ಷಿಣ : 9.144 ಮೀಟರ್ಸ್ ಒಟ್ಟಾರೆ ಅಳತೆ 125.419100 ಚದರ ಮೀಟರ್ಸ್, ಪೆಮ್ಮೆದೇವರಹಳ್ಳಿ ಗ್ರಾಮ, ತುಂಬಡಿ ಗ್ರಾಮ ಪಂಚಾಯತ್, ಕೊರಟಗೆರೆ ತಾಲೂಕು, ತುಮಕೂರು ಜಿಲ್ಲೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಕೃಷಿ ಭೂಮಿ, ಪಶ್ಚಿಮಕ್ಕೆ : ಪಂಚಾಯತ್ ರಸ್ತೆ, ಉತ್ತರಕ್ಕೆ : ಗಲ್ಲಿ ಮತ್ತು ಗೌರಮ್ಮ ಮನೆ, ದಕ್ಷಿಣಕ್ಕೆ : ಕಮಲರಾಜು ರವರ ಜಂಟಿ ಗೋಡೆ | ಎನ್‌ಪಿಎ ದಿನಾಂಕ 01.10.2026 ಡಿಮಾಂಡ್ ನೋಟೀಸ್ ದಿನಾಂಕ: 12.10.2026 | ರೂ. 4,92,743.68/– (ನಾಲ್ಕು ಲಕ್ಷದ ತೊಂಭತ್ತೆರಡು ಸಾವಿರದ ಏಳುನೂರಾ ನಲವತ್ತೂರು ರೂ ಮತ್ತು ಅರವತ್ತೆಂಟು ಪೈ ಮಾತ್ರ) 07.10.2026 ರಂದು ಬಾಕಿ ಇದ್ದಂತೆ |

ಆದುದುರಿಂದ ಕಲಂ ಸಂ.2ರಲ್ಲಿ ತಿಳಿಸಲಾದ ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರರು ಮತ್ತು ಅಡಮಾನದಾರರುಗಳಿಗೆ ಸೂಚನೆ ನೀಡಿ ಕರೆ ನೀಡುವುದೇನೆಂದರೇ ಸಂಬಂಧಿಸಿದ ಸಾಲಗಾರರು/ಸಹಸಾಲಗಾರರ ಕಲಂ 6ರ ಎದುರಾಗಿ ಸೂಚಿಸಲಾದ ದಿನಾಂಕದಂದು ಬಾಕಿ ಇದ್ದಂತೆ ಮತ್ತು ಪಾವತಿಸಬೇಕೆಂಬುದಾಗಿ ಕಂಡು ಬಂದ ಕಲಂ 6ರಲ್ಲಿ ತೋರಿಸಿದಂತೆ ಬಾಕಿ ಮೊತ್ತವನ್ನು ಸೂಚನೆ ಪ್ರಕಟಿಸಿದ 60 ದಿನಗಳ ಒಳಗಾಗಿ ಪಾವತಿ ಮಾಡಲೇಬೇಕು. ಒಟ್ಟಾರೆ ಮೊತ್ತ ಜೊತೆಗೆ ತದನಂತರದ ಬಡ್ಡಿ ಮತ್ತು ಪಾವತಿಯಾಗುವ ದಿನಾಂಕದವರೆಗೆ ಪಾವತಿಸಬೇಕಾದ ಇತರೆಗಳನ್ನು ಸೇರಿದ ಬಾಕಿ ಸಾಲದ ಮೊತ್ತ ಪಾವತಿಯಾಗದೇ ಇದ್ದ ಪಕ್ಷದಲ್ಲಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಆದ ನಾವು ಕಲಂ 4 ರಲ್ಲಿ ತೋರಿಸಲಾದ ಆಸ್ತಿಗಳ ಮೇಲೆ ಭದ್ರತಾ ಹಿತಾಸಕ್ತಿಯನ್ನು ಜಾರಿ ಮಾಡುವ ಸಮಂಜಸ ಕ್ರಮ ಕೈಗೊಳ್ಳಲಾಗುವುದು ಅನಿವಾರ್ಯವಾಗುತ್ತದೆ. ಸದರಿ ಫೈನಾನ್ಸಿಯಲ್‌ನ ಸಾಲಗಾರರ/ಸಹ-ಸಾಲಗಾರರ/ ಜಾಮೀನುದಾರರ/ಅಡಮಾನದರರ ವಿರುದ್ಧ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಲಭ್ಯವಾಗುವ ಅಂತಹ ಹಕ್ಕುಗಳು ಮತ್ತು ಪರಿಹಾರಗಳ ಬಗ್ಗೆ ಪೂರ್ವಾಗ್ರಹವಿಲ್ಲದೇ ಈ ನೋಟೀಸನ್ನು ಹೊರಡಿಸಲಾಗಿದೆ. ನಿಮಗೆ ನೀಡುವ ಎಚ್ಚರಿಕೆಯೇನೆಂದರೇ ಸದರಿ ಕಾಯಿದೆಯ ಕಲಂ 13(13)ರನ್ವಯ ನೀವು ಮೇಲಿನ ಭದ್ರತೆಯ ಬಗ್ಗೆ ಯಾವುದೇ ವ್ಯವಹಾರ ಮಾಡದಂತೆ/ ಭದ್ರತೆಯನ್ನು ವಿಲೇವಾರಿ ಮಾಡದಂತೆ ಅಥವಾ ಭದ್ರತಾ ಆಸ್ತಿಯನ್ನು ಭದ್ರತಾ ಸಾಲಿಗರ (ಸೆಕ್ಯೂರ್ಡ್ ಕ್ರೆಡಿಟರ್) ಪೂರ್ವಾನುಮತಿಯಿಲ್ಲದೇ ಮಾರಾಟ ಮಾಡದಂತೆ ಅಥವಾ ವರ್ಗಾಯಿಸದಂತೆ ಅಥವಾ ಇತರೆ ರೀತಿಯಲ್ಲಿ ಏನೂ ಮಾಡದಂತೆ ಪ್ರತಿಬಂಧಿಸಲಾಗಿದೆ.

ದಿನಾಂಕ : 14.10.2026, ಸ್ಥಳ : ತುಮಕೂರು — ಸಹಿ/– ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ



**ಆವಾಸ್ ಫೈನಾನ್ಸಿಯರ್ಸ್ ಲಿಮಿಟೆಡ್** — Aavas FINANCIERS LTD — SAPNE AAPKE, SAATH HAMAARA
(CIN:L65922RJ2011PLC034297) ನೋಂದಾಯಿತ ಮತ್ತು ಕಾರ್ಪ್ ಕಛೇರಿ: 201-202, 2ನೇ ಮಹಡಿ, ಸೌತ್ ಎಂಡ್ ಸ್ಕ್ವಯರ್, ಮಾನ್‌ಸರೋವರ್ ಇಂಡಸ್ಟ್ರಿಯಲ್ ಏರಿಯಾ, ಜೈಪುರ- 302020

**ಸ್ವಾಧೀನ ಸೂಚನೆ**

ಆದಾಗ್ಯೂ, ಕೆಳಸಹಿದಾರರು **ಆವಾಸ್ ಫೈನಾನ್ಸಿಯರ್ಸ್ ಲಿಮಿಟೆಡ್‌**ನ ಅಧಿಕೃತ ಅಧಿಕಾರಿಯಾಗಿ ಹಣಕಾಸು ಆಸ್ತಿಗಳ ಪ್ರಭೂತೀಕರಣ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002ರಡಿ ಹಾಗೂ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 9ರ ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಪರಿಚ್ಛೇಧ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳಂತೆ ಸಾಲಗಾರರಿಗೆ ಡಿಮಾಂಡ್ ನೋಟೀಸ್ ಜಾರಿ ಮಾಡಿ, ಸದರಿ ನೋಟೀಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳೊಳಗಾಗಿ ಮರುಪಾವತಿ ಮಾಡಲು ಸೂಚಿಸಿದ್ದರು. ಸಾಲಗಾರರು ಬಾಕಿ ಮೊತ್ತವನ್ನು ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ, ಕೆಳಸಹಿದಾರರು ಅವರಿಗೆ ಸದರಿ ನಿಯಮಗಳ ನಿಯಮ 9ರ ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಕಲಂ 13(4)ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ನೀಡುವ ಎಚ್ಚರಿಕೆಯೇನೆಂದರೇ ಸದರಿ ಆಸ್ತಿಗಳ ಬಗ್ಗೆ ಯಾರೂ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು ಹಾಗೂ ವ್ಯವಹರಿಸಿದ್ದೇ ಆದಲ್ಲಿ ಆವಾಸ್ ಫೈನಾನ್ಸಿಯರ್ಸ್ ಲಿಮಿಟೆಡ್ ತದನಂತರದ ಬಡ್ಡಿ ಹಾಗೂ ಯಥಾವತ್ ಪಾವತಿಯಾಗುವವರೆಗೆ ಛಾರ್ಜು ಇತ್ಯಾದಿ ಸೇರಿದ ಮೊತ್ತಕ್ಕೆ ಭಾಧ್ಯರಾಗಬೇಕಾಗುತ್ತದೆ.

| ಸಾಲಗಾರರ ಹೆಸರು | ಡಿಮಾಂಡ್ ನೋಟೀಸಿನ ದಿನಾಂಕ ಮತ್ತು ಮೊತ್ತ | ಆಸ್ತಿಯ ವಿವರ | ಸ್ವಾಧೀನತೆಯ ದಿನಾಂಕ ಮತ್ತು ವಿಧ |
|---|---|---|---|
| ನರಸಿಂಹಮೂರ್ತಿ ಬಿಎನ್, ಲಕ್ಷ್ಮೀದೇವಮ್ಮ ಎಲ್, ನರಸರಾಜು ಎನ್, ರವಿಕುಮಾರ್ ಆರ್ (A/C NO.) 221228602575353 | 6 ನವೆಂಬರ್ 25 ರೂ. 395064/- 3ನವೆಂಬರ್ 25 | ಮನೆಯ ಆಸ್ತಿ ಸಂ.65 ಮತ್ತು ಇ-ಖಾತಾ ಸಂ.152500302001300072, ಅಳತೆ: ಪೂರ್ವ ಪಶ್ಚಿಮ: 11.2777600000000001 ಮೀ. ಮತ್ತು ಉತ್ತರ ದಕ್ಷಿಣ: 7.9248 ಮೀ. ಬೈಚೇನಹಳ್ಳಿ ಗ್ರಾಮ, ಕೋಲಾಲ ಹೋಬಳಿ, ಕೊರಟಗೆ ತಾಲ್ಲೂಕು, ತುಮಕೂರು ಜಿಲ್ಲೆ, ಎಲೆರಾಮ್‌ಪುರ ಗ್ರಾಮಪಂಚಾಯಿತಿ ವ್ಯಾಪ್ತಿ. ಒಟ್ಟಾರೆ ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 11.2777600000000001 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 7.9248 ಮೀಟರ್. | ಭೌತಿಕ ಸ್ವಾಧೀನತೆಯ ಪಡೆದ ದಿನಾಂಕ 09 ಅಕ್ಟೋಬರ್ 26 |

ಸ್ಥಳ: ಕರ್ನಾಟಕ ದಿನಾಂಕ: 15.10.2026 ಅಧಿಕೃತ ಅಧಿಕಾರಿ, ಆವಾಸ್ ಫೈನಾನ್ಸಿಯರ್ಸ್ ಲಿಮಿಟೆಡ್


# ಬಡವರ ಬಾಳಿಗೆ ಬೆಳಕಾದ ಯಶಸ್ವಿ ಉದ್ಯಮಿ ಮೂರ್ತಿ

**ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ನಿರಂತರ ಬೆಂಬಲ**




**ಎಂಆರ್ ಡೆವಲಪರ್ಸ್ ಮೂಲಕ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಸಾಧನೆ**

ಪರಿಶ್ರಮ, ಆತ್ಮವಿಶ್ವಾಸ ಮತ್ತು ದೃಢಸಂಕಲ್ಪದೊಂದಿಗೆ ಸಾಧನೆಯ ಉತ್ತುಂಗಕ್ಕೇರಿದ ಯಶಸ್ವಿ ಉದ್ಯಮಿ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲೂಕಿನ ಸರ್ಜಾಪುರ ಹೋಬಳಿಯ ನೆರಿಗಾ ಗ್ರಾಮದ ಮೂರ್ತಿ.

ಬಡತನದ ಹಿನ್ನೆಲೆಯಿಂದ ಬೆಳೆದು ಬಂದ ಅವರು, ಆರಂಭದಲ್ಲಿ ಎದುರಾದ ಸವಾಲುಗಳನ್ನು ಮೆಟ್ಟಿನಿಂತು ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ತಮ್ಮದೇ ಆದ ಗುರುತನ್ನು ರೂಪಿಸಿಕೊಂಡಿದ್ದಾರೆ. ಉದ್ಯಮದಲ್ಲಿ ಆರ್ಥಿಕ ಪ್ರಗತಿ ಸಾಧಿಸುವುದರ ಜೊತೆಗೆ ಸಮಾಜದ ಅಗತ್ಯಗಳಿಗೆ ಸ್ಪಂದಿಸುತ್ತಾ ವಿವಿಧ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ.

**ಸರ್ಕಾರಿ ಶಾಲೆಯಿಂದ ಉದ್ಯಮದವರೆಗೆ**

ತಂದೆ ನಾರಾಯಣಸ್ವಾಮಿ ಹಾಗೂ ದಿವಂಗತ ತಾಯಿ ನಾರಾಯಣಮ್ಮ ಅವರ ಪುತ್ರರಾದ ಮೂರ್ತಿ ಅವರು, ನೆರಿಗಾ ಗ್ರಾಮದ ಸರ್ಕಾರಿ ಶಾಲೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದರು. ಗ್ರಾಮೀಣ ಪರಿಸರದಲ್ಲಿ ಬೆಳೆದ ಅವರು, ಮುಂದಿನ ಜೀವನದಲ್ಲಿ ಉತ್ತಮ ಸಾಧನೆ ಮಾಡಬೇಕೆಂಬ ಹಂಬಲದೊಂದಿಗೆ ಬೆಂಗಳೂರಿಗೆ ತೆರಳಿ ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಕ್ಕೆ ಸೇರಿದರು. ಉದ್ಯೋಗದ ಮೂಲಕ ಜೀವನದಲ್ಲಿ ಸ್ಥಿರತೆ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದ ಅವರಿಗೆ, ಕೋವಿಡ್ ಸಂದಿಗ್ಧತೆ ಅನಿರೀಕ್ಷಿತ ಸವಾಲುಗಳನ್ನು ತಂದೊಡ್ಡಿತು. ಈ ಪರಿಸ್ಥಿತಿಯಿಂದ ಉದ್ಯೋಗವನ್ನು ತೊರೆಯಬೇಕಾಯಿತು. ಆದರೆ, ಎದುರಾದ ಸಂಕಷ್ಟಕ್ಕೆ ಕುಗ್ಗದೆ ಹೊಸ ಅವಕಾಶಗಳನ್ನು ಹುಡುಕಿದ ಅವರು, ಸ್ವಂತ ಉದ್ಯಮ ಆರಂಭಿಸುವ ನಿರ್ಧಾರ ಕೈಗೊಂಡರು. ಅದರ ಫಲವಾಗಿ MR ಡೆವಲಪರ್ಸ್ ಹೆಸರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕಾಲಿಟ್ಟರು. ಆರಂಭಿಕ ಹಂತದಲ್ಲಿ ಹಲವು ಸವಾಲುಗಳಿದ್ದರೂ, ಪರಿಶ್ರಮ ಮತ್ತು ನಿರಂತರ ಪ್ರಯತ್ನದ ಮೂಲಕ ಉದ್ಯಮವನ್ನು ಬೆಳೆಸಿದರು. ತಮ್ಮ ಕೆಲಸದ ಮೇಲಿನ ಬದ್ಧತೆ ಹಾಗೂ ಆತ್ಮವಿಶ್ವಾಸದಿಂದ ಆರ್ಥಿಕವಾಗಿ ಪ್ರಗತಿ ಸಾಧಿಸಿ ಉದ್ಯಮಿಯಾಗಿ ಗುರುತಿಸಿಕೊಂಡರು.











## ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿಕೆ

ಶಿಕ್ಷಣ ಕ್ಷೇತ್ರದ ಜೊತೆಗೆ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿಯೂ ಮೂರ್ತಿ ಅವರು ಸಕ್ರಿಯರಾಗಿದ್ದಾರೆ. ದೇವಾಲಯಗಳ ನಿರ್ಮಾಣಕ್ಕೆ ಸಹಕಾರ ನೀಡುವ ಮೂಲಕ ಧಾರ್ಮಿಕ ಕಾರ್ಯಗಳಿಗೆ ಬೆಂಬಲ ನೀಡುತ್ತಿದ್ದಾರೆ. ಅನಾಥಾಶ್ರಮಗಳಿಗೆ ದಿನಸಿ ಸಾಮಗ್ರಿಗಳನ್ನು ವಿತರಿಸುವ ಮೂಲಕ ಅಲ್ಲಿನವರ ಅಗತ್ಯಗಳಿಗೆ ಸ್ಪಂದಿಸುತ್ತಿದ್ದಾರೆ. ಸಮಾಜದಲ್ಲಿ ನೆರವು ಅಗತ್ಯವಿರುವವರಿಗೆ ತಮ್ಮ ಕೈಲಾದ ಸಹಾಯ ಮಾಡಬೇಕು ಎಂಬ ಮನೋಭಾವದಿಂದ ಇಂತಹ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ.



ಸಮಾಜದಿಂದ ದೊರೆತ ಅವಕಾಶಗಳು ಮತ್ತು ಬೆಂಬಲದ ಹಿನ್ನೆಲೆಯಲ್ಲಿ ಬೆಳೆದವರು, ಸಮಾಜದ ಏಳಿಗೆಗೂ ಕೊಡುಗೆ ನೀಡಬೇಕು ಎಂಬ ಆಶಯ ಅವರ ಸೇವಾ ಕಾರ್ಯಗಳಲ್ಲಿ ಪ್ರತಿಬಿಂಬಿಸುತ್ತದೆ. ವೈಯಕ್ತಿಕ ಬೆಳವಣಿಗೆಯೊಂದೇ ಯಶಸ್ಸಿನ ಮಾನದಂಡವಲ್ಲ; ಸಮಾಜದ ಅಗತ್ಯಗಳಿಗೆ ಸ್ಪಂದಿಸುವುದೂ ಮುಖ್ಯ ಎಂಬ ದೃಷ್ಟಿಕೋನದೊಂದಿಗೆ ಅವರು ತಮ್ಮ ಸೇವಾ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದಾರೆ.





## ಶಿಕ್ಷಣಕ್ಕೆ ನೆರವಾಗುವ ಸೇವಾ ಮನೋಭಾವ

ತಾವು ಬೆಳೆದ ಪರಿಸರ ಮತ್ತು ವಿದ್ಯಾಭ್ಯಾಸ ಮಾಡಿದ ಶಾಲೆಯೊಂದಿಗಿನ ನಂಟನ್ನು ಮರೆಯದ ಮೂರ್ತಿ ಅವರು, ಶಿಕ್ಷಣ ಕ್ಷೇತ್ರಕ್ಕೆ ನೆರವು ನೀಡುವುದಕ್ಕೆ ಆದ್ಯತೆ ನೀಡುತ್ತಿದ್ದಾರೆ. ನೆರಿಗಾ ಸರ್ಕಾರಿ ಶಾಲೆ ಸೇರಿದಂತೆ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಅಗತ್ಯವಾದ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸುವ ಮೂಲಕ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಅಗತ್ಯ ನೆರವು ದೊರೆತಾಗ ಅವರ ಶಿಕ್ಷಣ ಮುಂದುವರಿಸಲು ಅನುಕೂಲವಾಗುತ್ತದೆ ಎಂಬ ಆಶಯದಿಂದ ಈ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ.

ವಿಶೇಷವಾಗಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಮೂಲಕ ಅವರ ಶೈಕ್ಷಣಿಕ ಪ್ರಗತಿಗೆ ಬೆಂಬಲ ನೀಡುತ್ತಿದ್ದಾರೆ. ವಿದ್ಯಾರ್ಥಿಗಳ ಪರಿಶ್ರಮಕ್ಕೆ ಪ್ರೋತ್ಸಾಹ ದೊರೆತರೆ ಅವರು ಮುಂದಿನ ಹಂತದ ಶಿಕ್ಷಣದಲ್ಲಿಯೂ ಉತ್ತಮ ಸಾಧನೆ ಮಾಡಬಹುದು ಎಂಬ ನಂಬಿಕೆ ಅವರ ಸೇವಾ ಚಟುವಟಿಕೆಗಳಿಗೆ ಪ್ರೇರಣೆಯಾಗಿದೆ. ತಾವು ಕಲಿತ ಶಾಲೆ ಸೇರಿದಂತೆ ಇತರೆ ಶಿಕ್ಷಣ ಸಂಸ್ಥೆಗಳ ಮಕ್ಕಳಿಗೆ ನೆರವಾಗುವ ಮೂಲಕ, ತಮ್ಮ ಬೆಳವಣಿಗೆಯೊಂದಿಗೆ ಮುಂದಿನ ಪೀಳಿಗೆಯ ಭವಿಷ್ಯ ರೂಪಿಸುವ ಕಾರ್ಯದಲ್ಲಿಯೂ ಕೈಜೋಡಿಸುತ್ತಿದ್ದಾರೆ.

## ಯಶಸ್ಸಿನ ಹಿಂದಿರುವ ಕುಟುಂಬದ ಬೆಂಬಲ

ತಮ್ಮ ಜೀವನದ ಪ್ರಗತಿ ಹಾಗೂ ಉದ್ಯಮದ ಬೆಳವಣಿಗೆಯಲ್ಲಿ ತಾಯಿ ದಿವಂಗತ ನಾರಾಯಣಮ್ಮ ಮತ್ತು ಪತ್ನಿ ಮುನಿರತ್ನ ಅವರ ಸಹಕಾರ ಪ್ರಮುಖ ಪಾತ್ರ ವಹಿಸಿದೆ ಎಂದು ಮೂರ್ತಿ ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಕುಟುಂಬದ ಪ್ರೋತ್ಸಾಹ ಮತ್ತು ಬೆಂಬಲವು ಕಷ್ಟದ ಸಂದರ್ಭಗಳಲ್ಲಿ ಆತ್ಮವಿಶ್ವಾಸದಿಂದ ಮುನ್ನಡೆಯಲು ನೆರವಾಗಿದೆ ಎಂಬುದು ಅವರ ಅಭಿಪ್ರಾಯ. ಪತ್ನಿ ಮುನಿರತ್ನ, ಪುತ್ರಿ ನಿವೇದಿತಾ ಹಾಗೂ ಪುತ್ರ ದೃವಿಕ್ ಅವರನ್ನೊಳಗೊಂಡ ಕುಟುಂಬ ಅವರ ಜೀವನದ ಪ್ರಮುಖ ಆಧಾರವಾಗಿದೆ.





ಬಡತನದ ಹಿನ್ನೆಲೆಯಿಂದ ಆರಂಭವಾದ ಅವರ ಪಯಣ, ಪರಿಶ್ರಮ ಮತ್ತು ದೃಢಸಂಕಲ್ಪದ ಮೂಲಕ ಉದ್ಯಮದ ಯಶಸ್ಸಿನತ್ತ ಸಾಗಿರುವುದು ಗಮನಾರ್ಹ. ಆರ್ಥಿಕ ಪ್ರಗತಿಯೊಂದಿಗೆ ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಿಗೂ ಕೊಡುಗೆ ನೀಡುತ್ತಿರುವ ಮೂರ್ತಿ ಅವರು, ನೆರಿಗಾ ಗ್ರಾಮದೊಂದಿಗೆ ತಮ್ಮ ನಂಟನ್ನು ಉಳಿಸಿಕೊಂಡಿದ್ದಾರೆ. ಉದ್ಯಮದ ಬೆಳವಣಿಗೆಯ ಜೊತೆಗೆ ಸಮಾಜದ ಹಿತವನ್ನೂ ಗಮನದಲ್ಲಿಟ್ಟುಕೊಂಡು ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಅವರ ನಡೆ, ಯಶಸ್ಸಿನೊಂದಿಗೆ ಸಾಮಾಜಿಕ ಜವಾಬ್ದಾರಿಯನ್ನೂ ನಿಭಾಯಿಸುವ ಮನೋಭಾವಕ್ಕೆ ಉದಾಹರಣೆಯಾಗಿದೆ.

ಸಮಾಜ ಸೇವಕ ಯುವಮುಖಂಡ ಮೂರ್ತಿ ಅವರ ಉದ್ಯಮಕ್ಷೇತ್ರದಲ್ಲಿನಸಾಧನೆಹಾಗೂಸಮಾಜಸೇವೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಗೌರವಿಸಿ ಪುರಸ್ಕರಿಸಿವೆ.



ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಮಲೇಶಿಯಾದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೂರ್ತಿ ಅವರು ನಾಡಿಗೆ ನೀಡುತ್ತಿರುವ ಅವಿಸ್ಮರಣೀಯ ಕೊಡುಗೆಯನ್ನು ಗುರುತಿಸಿ ಈಸ್ಟ್ ಏಷ್ಯಾ ಲೀಡರ್‌ಶಿಪ್ ಪ್ರಶಸ್ತಿ ನೀಡಿ ಗೌರವಿಸಿದೆ.